ದಿನಾಂಕ 11.6.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ 1 ರಿಂದ 6 ನೇ ಪ್ರತಿವಾದಿ ಪರ ಶ್ರೀ. ಎ.ಎಸ್.ಕೆ ವಕೀಲರಿಂದಃ

ವಾದಿ ನನ್ನ ಸಹೋದರಿ. ವಾದಿಯು ಹಿಂದೂ ಧರ್ಮಕ್ಕೆ ಸೇರಿದವರನ್ನು ವಿವಾಹವಾಗಿದ್ದರು ಎಂದರೆ ಸರಿ. ಮದುವೆಯಾದ ನಂತರ ವಾದಿ ಬಾಂಬೆಯಲ್ಲಿ ವಾಸವಿದ್ದರು. ಎಷ್ಟು ವರ್ಷಗಳಿಂದ ಎಂದು ನನಗೆ ನೆನಪಿಲ್ಲ, ಆದರೆ ಹಿಂದಿನಿಂದಲೂ ಬಾಂಬೆಯಲ್ಲೆ ವಾಸವಿದ್ದಾರೆ. ದಿಃ 25.1.1999 ರಲ್ಲಿ ನನ್ನ ತಂದೆಯವರು ಮೃತಪಟ್ಟಿರುತ್ತಾರೆ. ನನ್ನ ತಂದೆಯವರು ಅವರ ಜೀವಿತ ಕಾಲದಲ್ಲಿ 8 ನೇ ಪ್ರತಿವಾದಿಯ ಸಹಾಯದಿಂದ ದಾವಾ ಸ್ವತ್ತನ್ನು ನೋಡಿಕೊಳ್ಳುತ್ತಿದ್ದರು. ನನ್ನ ತಂದೆಯವರು ಮರಣಹೊಂದಿದ ನಂತರ ನನ್ನ ತಾಯಿ ಹಾಗೂ 8 ನೇ ಪ್ರತಿವಾದಿ 2006 ರವರೆಗೂ ದಾವಾ ಸ್ವತ್ತುಗಳನ್ನು ನೋಡಿಕೊಳ್ಳುತ್ತಿದ್ದರು. 5 ನೇ ಪ್ರತಿವಾದಿ ಯಾವಾಗ ಮುಂಬೈಗೆ ಹೋಗಿದ್ದಾರೆ ಎಂದರೆ ಸಾಕ್ಷಿ ಸರಿಯಾಗಿ ನೆನಪಿಲ್ಲ ಆದರೆ 1980 ರಲ್ಲಿ ಇರಬಹುದು. ಆ ಸಮಯದಲ್ಲಿ 5 ನೇ ಪ್ರತಿವಾದಿಗೆ 16 ವರ್ಷ ಪ್ರಾಯವಾಗಿತ್ತು. ಯಾವ ಕಾರಣಕ್ಕೆ ಮುಂಬೈಗೆ ಹೋಗಿದ್ದಾರೆ ಎಂದರೆ ಸಾಕ್ಷಿ ಆತ ಮುಂಬೈಗೆ ಹೋಗಿರುವುದಿಲ್ಲ ನನ್ನ ಸಹೋದರಿಯರು ಆತನ ವಿದ್ಯಾಭ್ಯಾಸಕ್ಕಾಗಿ ಕರೆದುಕೊಂಡು ಹೋಗಿದ್ದರು ಎಂದು ಹೇಳುತ್ತಾರೆ. 5 ನೇ ಪ್ರತಿವಾದಿಗೆ 18 ವರ್ಷ ಇದ್ದಾಗ ಮುಂಬೈನ ಏರ್ ಪೋರ್ಟ್ ನಲ್ಲಿ ಕಾರ್ಗೋ ವಿಭಾಗದಲ್ಲಿ ಕೆಲಸಕ್ಕೆ ಸೇರಿದ್ದರು ಎಂದರೆ ಸಾಕ್ಷಿ 18 ವರ್ಷದವರಿಗೆ ಮುಂಬೈನಲ್ಲಿ ಯಾರೂ ಸಹ ಉದ್ಯೋಗ ಕೊಡುವುದಿಲ್ಲ ಎಂದು ಹೇಳುತ್ತಾರೆ.

2. 2005 ರಲ್ಲಿ ಮೃತ ಸಹೋದರಿ ಲಿಡ್ವಿನ್ ಪಿಂಟೋ ರವರು ತೀವ್ರತರಹದ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು ಎಂದರೆ ಸರಿ. ಆ ಸಮಯದಲ್ಲಿ 5 ನೇ ಪ್ರತಿವಾದಿ ಆಕೆಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆಕೆ ಕೆಲಸದಲ್ಲಿ ಇದ್ದು, ಅದೇ ಸಮಯದಲ್ಲಿ ಮೃತಪಟ್ಟಿರುತ್ತಾರೆ. ಆಧಾಯ ತೆರಿಗೆ ವಿಭಾಗವು ಆಕೆಯ ವೈದ್ಯಕೀಯ ಖರ್ಚುಗಳನ್ನು ನೋಡಿಕೊಳ್ಳುತ್ತಿತ್ತು ಎಂದು ಹೇಳುತ್ತಾರೆ. ಎಲ್ಲಾ ಸಹೋದರ ಮತ್ತು ಸಹೋದರಿಯರು ಆಕೆಯನ್ನು ನೋಡಿಕೊಳ್ಳುತ್ತಿದ್ದೆವು ಎಂದು ಹೇಳುತ್ತಾರೆ. 5 ನೇ ಪ್ರತಿವಾದಿಯು ಮುಂಬೈನಲ್ಲಿ 2 ನೇ ಪ್ರತಿವಾದಿಗಾಗಿ ಒಂದು ಮನೆಯನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ, 2 ನೇ ಪ್ರತಿವಾದಿ ಏರ್ ಇಂಡಿಯಾದಲ್ಲಿ ಆಫೀಸರ್ ಲೆವೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು ಎಂದು ಹೇಳುತ್ತಾರೆ. 8 ನೇ ಪ್ರತಿವಾದಿ

ಯಾವುದಾದರೂ ಕೆಲಸದಲ್ಲಿ ಇದ್ದರಾ ಎಂದರೆ ಸಾಕ್ಷಿ ಆತ Global Consulting company and Vishu Consulting Company, Mangaluru ನಲ್ಲಿ ಕೆಲಸ ಮಾಡುತ್ತಿದ್ದರು, ಆ ಸಮಯದಲ್ಲಿ ಮಡಂತ್ಯಾರಿನಲ್ಲಿ ವಾಸವಿದ್ದರು. ಯಾವ ಸಮಯದಲ್ಲಿ ಅವರು ಮಾನಸ ಅಮ್ಯುಜ್‌ಮೆಂಟ್ ಪಾರ್ಕಿನಲ್ಲಿ ನಿರ್ದೇಶಕರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದರೆ ನಾವು ಆತನ ಜೊತೆ ಮಾತನಾಡುವಾಗ ನಾನು ವ್ಯವಹಾರವನ್ನು ಮಾಡುತ್ತಿದ್ದೇನೆ ಎಂದು ಹೇಳುತ್ತಿದ್ದರು ಎಂದು ಹೇಳುತ್ತಾರೆ. ಅವರಿಗೆ ವ್ಯವಹಾರದಲ್ಲಿ ಮತ್ತು ಇತರೆ ಚಟುವಟಿಕೆಗಳಲ್ಲಿ ತುಂಬಾ ನಷ್ಟವಾಗಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ದಾವಾ ಸ್ವತ್ತಿನ ಆಧಾರದ ಮೇಲೆ 8 ನೇ ಪ್ರತಿವಾದಿ ಹೆಚ್ಚು ಸಾಲವನ್ನು ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿ 2006 ರಲ್ಲಿ ತನ್ನ ವಾಸವನ್ನು ಮಂಗಳೂರಿಗೆ ವರ್ಗಾವಣೆ ಮಾಡಿಕೊಳ್ಳುವುದಾಗಿ ಹೇಳಿದ್ದರು ಎಂದರೆ ಸರಿ. 8 ನೇ ಪ್ರತಿವಾದಿ ಮಂಗಳೂರಿಗೆ ಹೋದ ನಂತರದಲ್ಲಿ ವಯಸ್ಸಾದ ತಾಯಿಯನ್ನು ಹೊರತುಪಡಿಸಿ ದಾವಾ ಸ್ವತ್ತಿನಲ್ಲಿ ಯಾರು ಇರಲಿಲ್ಲ ಎಂದರೆ ಸರಿ. ಪ್ರಸ್ತುತವಾಗಿ 1 ನೇ ಪ್ರತಿವಾದಿಗೆ 94 ವರ್ಷ ವಯಸ್ಸಾಗಿರುತ್ತದೆ. ಆ ಸಮಯದಲ್ಲಿ 1 ನೇ ಪ್ರತಿವಾದಿಯ ಜೊತೆ ಬೇರೆ ಯಾರು ಇಲ್ಲದ ಕಾರಣ 5 ನೇ ಪ್ರತಿವಾದಿ ಅನಿವಾರ್ಯವಾಗಿ 1 ನೇ ಪ್ರತಿವಾದಿಯ ಜೊತೆ ಬಂದು ಇದ್ದರು ಎಂದರೆ ಸರಿಯಲ್ಲ. ಎಲ್ಲಾ ಸಹೋದರ ಮತ್ತು ಸಹೋದರಿಯರು 5 ನೇ ಪ್ರತಿವಾದಿಗೆ ಮಡಂತ್ಯಾರಿನಲ್ಲಿರುವ ದಾವಾ ಸ್ವತ್ತಿಗೆ ಹೋಗುವಂತೆ ಒತ್ತಾಯಿಸಿದ್ದೆವು ಎಂದರೆ ಸರಿಯಲ್ಲ.

3. ದಾವಾ ಸ್ವತ್ತನ್ನು ಅಭಿವೃದ್ದಿಗೊಳಿಸಲು ಹಾಗೂ ಮನೆಯನ್ನು ಕಟ್ಟಲು ಹಣವನ್ನು ಕೊಟ್ಟಿದ್ದೇನೆ ಎಂದು ತಿಳಿಸಿದ್ದು ಅದಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿ ದಾಖಲೆಗಳು ಇದ್ದು, ಈಗ ನನ್ನ ಜಿ.ಪಿ.ಎ ಹೋಲ್ಡರ್ ಆದ 8 ನೇ ಪ್ರತಿವಾದಿಯ ಹತ್ತಿರ ಇದೆ ಎಂದು ಹೇಳುತ್ತಾರೆ. ಯಾವ ರೀತಿ ನೀಡಿದ್ದೀರಿ ಎಂದರೆ ಎನ್.ಆರ್.ಐ ಚೆಕ್ ಮೂಲಕ ನೀಡಿದ್ದೇನೆ. ಯಾರ ಹೆಸರಿಗೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಅದು 8 ನೇ ಪ್ರತಿವಾದಿಗೆ ಗೊತ್ತು ಎಂದು ಹೇಳುತ್ತಾರೆ. 8 ನೇ ಪ್ರತಿವಾದಿ ಬ್ಯಾಂಕ್ ಅಕೌಂಟ್‌ನ್ನು ನೋಡಿಕೊಳ್ಳುತ್ತಿದ್ದರಾ ಎಂದರೆ ಹೌದು. ನಾನು ಆತನಿಗೆ ಅಧಿಕಾರವನ್ನು ಕೊಟ್ಟಿದ್ದೆ. ಜಿ.ಪಿ.ಎ ಕಾಪಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಈಗ ನನ್ನ ಹತ್ತಿರ ಯಾವುದೇ ದಾಖಲೆಗಳು ಇರುವುದಿಲ್ಲ ಎಂದು ಹೇಳುತ್ತಾರೆ. ದಾವಾ ಸ್ವತ್ತಿನ ಅಭಿವೃದ್ದಿಗೆ ಹಾಗೂ ಮನೆಯನ್ನು ಕಟ್ಟಲು ಯಾವುದೇ ಹಣವನ್ನು ನಾನು ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಮನೆ ಕಾಮಗಾರಿ ಮಾಡಲು 17 ರಿಂದ 20 ಲಕ್ಷವನ್ನು ನಾನು ಕೊಟ್ಟಿದ್ದೇನೆ ಎಂದು

ಹೇಳುತ್ತಾರೆ. ಮಸ್ಕತ್‌ನಲ್ಲಿದ್ದಾಗ ನಗದಾಗಿ ಹಣವನ್ನು ಪಾವತಿ ಮಾಡಲು ಯಾರಿಗೂ ಸಾಧ್ಯವಿಲ್ಲ ಎಂದರೆ ಸಾಕ್ಷಿ ನಗದಾಗಿ ಕೊಟ್ಟಿಲ್ಲ, ಎನ್.ಆರ್.ಐ ಚೆಕ್ ಮೂಲಕ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಯಾರ ಹೆಸರಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನ್ನ ಎಲ್ಲಾ ಬ್ಯಾಂಕ್ ಅಕೌಂಟನ್ನು 8 ನೇ ಪ್ರತಿವಾದಿ ನೋಡಿಕೊಳ್ಳುತಿದ್ದರು, ಎಲ್ಲಾ ದಾಖಲೆ ಆತನ ಹತ್ತಿರ ಇದೆ ಎಂದು ಹೇಳುತ್ತಾರೆ. ಯಾವ ಯಾವ ಬ್ಯಾಂಕಿನಲ್ಲಿ ನಿಮ್ಮ ಖಾತೆ ಇದೆ ಎಂದರೆ ಸಾಕ್ಷಿ Corporation Bank, Madanathyar, SBI, Mangaluru, Syndicate Bank, Surathkal ನಲ್ಲಿ ಇವೆ ಎಂದು ಹೇಳುತ್ತಾರೆ. ಆ ಬ್ಯಾಂಕಿನ ಅಕೌಂಟ್ ಎಕ್ಸ್-ಟ್ರಾಕ್ಟ್ ನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅದನ್ನು ಹಾಜರುಪಡಿಸುವ ಸ್ಥಿತಿಯಲ್ಲಿ ನಾನು ಇಲ್ಲ ಎಂದು ಹೇಳುತ್ತಾರೆ. ಬ್ಯಾಂಕಿನವರನ್ನು ಕೇಳಿದಾಗ 2001 ರ ನಂತರ ಎಲ್ಲಾ ಅಕೌಂಟ್ ಡಿಜಿಟಲ್ ಆಗಿರುವುದರಿಂದ ದಾಖಲೆಗಳು ಇರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದು ಹೇಳುತ್ತಾರೆ. ಎಲ್ಲಿಂದ ಹಣವನ್ನು ಆ ಖಾತೆಗೆ ಡೆಪೋಸಿಟ್ ಮಾಡಿರುತ್ತೀರಿ ಎಂದರೆ ಸಾಕ್ಷಿ ನನ್ನ ಕಡೆಯಿಂದ ನನ್ನ ಹೆಂಡತಿಯ ಕಡೆಯಿಂದ ಮತ್ತು ಇತರೆ ಕುಟುಂಬದ ಸದಸ್ಯರಿಂದ ಹಾಗೂ ಸ್ನೇಹಿತರ ಕಡೆಯಿಂದ ಮಾಡಿಸಿದ್ದೇನೆ ಎಂದು ಹೇಳುತ್ತಾರೆ. ಸದರಿ ಹಣವನ್ನು ಬ್ಯಾಂಕ್ ಅಕೌಂಟ್ ಮೂಲಕ ವರ್ಗಾವಣೆ ಮಾಡಿಸಿರುತ್ತೇನೆ.

4. ಮಸ್ಕತ್ ನಲ್ಲಿ ಆಧಾಯ ತೆರಿಗೆ ಪಾವತಿ ಮಾಡುತ್ತಿದ್ದೀರಾ ಎಂದರೆ ಸಾಕ್ಷಿ ಮಸ್ಕತ್ Income Tax free ಎಂದು ಹೇಳುತ್ತಾರೆ. ಇಂಡಿಯಾದಲ್ಲಿ ಪಾವತಿ ಮಾಡಿದ್ದೀರಾ ಎಂದರೆ ನಾನು ಎನ್.ಆರ್.ಐ ಆದ ಕಾರಣ ಅನ್ವಯವಾಗುವುದಿಲ್ಲ ಎಂದು ಹೇಳುತ್ತಾರೆ. ನಿಮ್ಮ ತಾಯಿಗೆ ತಿಂಗಳಿಗೆ 5 ಸಾವಿರ ಕಳುಹಿಸುತ್ತಿದ್ದೇನೆ ಎಂದು ತಿಳಿಸಿದ್ದು ದಾಖಲೆ ಇದೆಯಾ ಎಂದರೆ ಹೌದು, 2006 ರವರೆಗೂ ದಾಖಲೆಗಳು ಇರುತ್ತವೆ. 2006 ರಲ್ಲಿ ಕುಟುಂಬ ಸದಸ್ಯರ ನಡುವೆ ಮುಂಬೈನಲ್ಲಿ ಮಾತುಕತೆಯಾಗಿತ್ತು ಎಂದರೆ ಹೌದು. ಆ ಮಾತುಕತೆಯಲ್ಲಿ ಏನೇನು ತೀರ್ಮಾನ ಆಗಿತ್ತು ಎಂದರೆ ಆ ಸಮಯದಲ್ಲಿ ನನ್ನ 2 ನೇ ಸಹೋದರಿ ಅನಾರೋಗ್ಯದಲ್ಲಿ ಇದ್ದರು, ಆ ಸಮಯದಲ್ಲಿ ಆಕೆ ವಾದಿಯ ಮನೆಯಲ್ಲಿದ್ದರು. ಎಷ್ಟು ಸಮಯದವರೆಗೂ ಇದ್ದರು ಎಂದರೆ 3 ರಿಂದ 4 ತಿಂಗಳು ಕಾಲ ವಾದಿಯ ಮನೆಯಲ್ಲಿದ್ದರು. ಆ ಸಮಯದಲ್ಲಿ ವಾದಿ ಮತ್ತು 3 ನೇ ಪ್ರತಿವಾದಿಗೆ ಅನಾರೋಗ್ಯದ ಸಮಸ್ಯೆ ಇದ್ದ ಕಾರಣ 5 ನೇ ಪ್ರತಿವಾದಿ ಸ್ವಯಂ ಪ್ರೇರಿತವಾಗಿ 3 ನೇ ಪ್ರತಿವಾದಿಗೆ ಆಧಾಯ ಇರುವುದರಿಂದ ಆಕೆಯ ಆಧಾಯದಿಂದ ನಾನು 1 ನೇ ಪ್ರತಿವಾದಿ ಹಾಗೂ 8 ನೇ ಪ್ರತಿವಾದಿಯ ಸಹಾಯದಿಂದ ಆಕೆಯನ್ನು ನೋಡಿಕೊಳ್ಳುತ್ತೇನೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ಆ ಸಮಯದಲ್ಲಿ ನನ್ನ ತಾಯಿ ಹಾಗೂ

ಎಲ್ಲಾ ಮಕ್ಕಳ ಹೆಸರಿನಲ್ಲಿ ಮಡಂತ್ಯಾರಿನಲ್ಲಿರುವ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಒಬ್ಬರ ಹೆಸರಿಗೆ ಮಾಡಿ ಆನಂತರ ಯಾರಿಗಾದರೂ ಆ ಸ್ವತ್ತಿನಲ್ಲಿ ಹಿಸ್ಸೆ ಬೇಕಿದ್ದರೆ ಈಗಲೇ ಕೇಳಬೇಕೆಂದು ಮಾತುಕತೆಯಾಗಿತ್ತು ಎಂದು ಹೇಳುತ್ತಾರೆ. ಆ ಸಮಯದಲ್ಲಿ ನೀವೆಲ್ಲರೂ 1 ನೇ ಪ್ರತಿವಾದಿಗೆ ನಿಮ್ಮ ಹಕ್ಕನ್ನು ಬಿಟ್ಟುಕೊಡುವುದಾಗಿ ತಿಳಿಸಿದ್ದರಾ ಎಂದರೆ ಇಲ್ಲ. ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಮಾತುಕತೆಯಾಗಿರುವುದಿಲ್ಲ. ಆದರೆ ಯಾವ ಕಾರಣಕ್ಕೆ ನಿಮ್ಮ ತಾಯಿಯ ಹೆಸರಿಗೆ ರಿಲೀಸ್ ಡೀಡ್ ನ್ನು ಮಾಡಿಕೊಟ್ಟಿದ್ದಿರಿ ಎಂದರೆ ಸಾಕ್ಷಿ ಮಾತುಕತೆಯ ಸಮಯದಲ್ಲಿ ನಾನು, ವಾದಿ ಹಾಗೂ 6 ನೇ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ನಮಗೆ ಹಿಸ್ಸೆ ಬೇಕು ಎಂದು ಕೇಳಿದ್ದೆವು. ನನ್ನ ತಾಯಿಯ ಸಮಕ್ಷಮದಲ್ಲಿ ಎಲ್ಲರೂ ಸಹ ಅದನ್ನು ಒಪ್ಪಿದ್ದರು.

5. ನಾನು University Degree ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಇಂಗ್ಲೀಷ್ ಓದಲು ಬರೆಯಲು ಹಾಗೂ ಅರ್ಥವಾಗುತ್ತದೆ. ಯಾವುದೇ ದಾಖಲೆಗೆ ಸಹಿ ಮಾಡುವ ಪೂರ್ವದಲ್ಲಿ ಅದನ್ನು ಓದಿ ತಿಳಿದುಕೊಂಡು ಒಪ್ಪಿ ಸಹಿ ಮಾಡಬೇಕೆಂದು ನನಗೆ ಗೊತ್ತು. ನೀವು ನಿಪಿ3 ರ ದಾಖಲೆಗೆ ನಿಮ್ಮ ಪರವಾಗಿ ಒಪ್ಪಿ ಸಹಿ ಮಾಡಲು 8 ನೇ ಪ್ರತಿವಾದಿಗೆ ಅಧಿಕಾರ ಕೊಟ್ಟಿದ್ದೀರಾ ಎಂದರೆ ಹೌದು, ಆದರೆ ಕುಟುಂಬದವರ ನಡುವೆಯಾದ ಮಾತುಕತೆ ಸಮಯದಲ್ಲಿ ಆದಂತಹ assurance ನಿಂದ ಹೇಳಿದ್ದೇನೆ. ಸಾಕ್ಷಿ ಮುಂದುವರಿದು ಜಿ.ಪಿ.ಎ ಜೊತೆಯಲ್ಲಿ ಪ್ರಮಾಣ ಪತ್ರವನ್ನು ನನ್ನ ಹಿಸ್ಸೆಯನ್ನು ಕೇಳಿ ಲಗತ್ತಿಸಿದ್ದೆ ಎಂದು ಹೇಳುತ್ತಾರೆ. ಆ ಪ್ರಮಾಣ ಪತ್ರಕ್ಕೆ Indian counselor and Mascath Counselor attest ಮಾಡಿದ್ದರು ಎಂದು ಹೇಳುತ್ತಾರೆ. ಸಾಕ್ಷಿಗೆ ನಿಡಿ1 ನ್ನು ತೋರಿಸಿ ಸದರಿ ದಾಖಲೆ ಅದೆಯಾ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿರುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಿಮ್ಮ ಅವಿಭಕ್ತ ಹಕ್ಕನ್ನು 1 ನೇ ಪ್ರತಿವಾದಿಯ ಹೆಸರಿಗೆ ಖುಲಾಸೆಗೊಳಿಸಲು ಯಾವುದೇ ಅಭ್ಯಂತ್ರ ಇರಲಿಲ್ಲ ಎಂದರೆ ಸಾಕ್ಷಿ ನನ್ನ ಹಿಸ್ಸೆ ಭಾಗದ ಸ್ವತ್ತನ್ನು ನನಗೆ ಕೊಡುತ್ತೇವೆ ಎಂಬ ಆಶ್ವಾಸನೆ ನೀಡಿದ್ದರೆ ನನ್ನದು ಯಾವುದೇ ಅಭ್ಯಂತ್ರ ಇಲ್ಲ ಎಂದು ಹೇಳುತ್ತಾರೆ. ನಿಪಿ3 ನ್ನು ಬರೆದುಕೊಟ್ಟಿರುವುದಕ್ಕೆ ನಿಮ್ಮದು ಯಾವುದಾದರೂ ತಕರಾರು ಇತ್ತಾ ಎಂದರೆ ಹೌದು. ನಿಪಿ3 ನ್ನು ಬರೆದುಕೊಟ್ಟಿದ್ದಾರೆ ಎಂದು ಯಾವಾಗ ಗೊತ್ತಾಗಿದೆ ಎಂದರೆ ಸಾಕ್ಷಿ 2017 ರವರೆಗೂ ನನಗೆ ಅದರ ಬಗ್ಗೆ ಗೊತ್ತಾಗಿರುವುದಿಲ್ಲ ಎಂದು ಹೇಳುತ್ತಾರೆ. 2017 ರಲ್ಲಿ ಯಾವ ರೀತಿ ಗೊತ್ತಾಗಿದೆ ಎಂದರೆ ಸಾಕ್ಷಿ ನನ್ನ ತಾಯಿಯನ್ನು ನೋಡಲು ಮಡಂತ್ಯಾರಿಗೆ ನನ್ನ ಹೆಂಡತಿ ಮತ್ತು ಮಕ್ಕಳ ಜೊತೆ ಬಂದಾಗ ಆ ಸಮಯದಲ್ಲಿ 5 ನೇ ಪ್ರತಿವಾದಿ ಸ್ವತ್ತಿನ ಸ್ವಾದೀನತೆಯನ್ನು ಬಲವಂತವಾಗಿ ಪಡೆದುಕೊಂಡಿರುತ್ತಾರೆ.

5 ನೇ ಪ್ರತಿವಾದಿ ಇಲ್ಲದ ಸಂದರ್ಭದಲ್ಲಿ ನಾನು ನನ್ನ ತಾಯಿ ಹಾಗೂ ನನ್ನ ಸಹೋದರಿ ವಾದಿಯ ಜೊತೆ ಮಾತನಾಡುವಾಗ ಕೆಲವು ಕೆಲಸದವರು ಹೊರಗೆ ಕೆಲಸ ಮಾಡುತ್ತಿದ್ದರು, ಆಗ ನನ್ನ ತಾಯಿಯನ್ನು ಯಾರು ಯಾಕೆ ಈ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಕೇಳಿದಾಗ ನನ್ನ ತಾಯಿ 5 ನೇ ಪ್ರತಿವಾದಿ ದಾವಾ ಸ್ವತ್ತಿನ ಒಂದು ಭಾಗಕ್ಕೆ ಸಂಬಂಧಪಟ್ಟಂತೆ ಕ್ರಯ ಕರಾರು ಮಾಡಿದ್ದಾರೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ಕ್ರಯ ಕರಾರು ಮಾಡಲು ಎಲ್ಲಾ ತಯಾರಿಯನ್ನು ನಡೆಸಿಕೊಳ್ಳುತ್ತಿದ್ದಾರೆ ಎಂದು ಹೇಳಿದ್ದರು. ಆಗ ನನ್ನ ತಾಯಿ ಎಲ್ಲರೂ ಬಂದು ಒಟ್ಟಿಗೆ ಚರ್ಚಿಸಿ ಸ್ವತ್ತಿನ ಹಿಸ್ಸೆಯನ್ನು ಪಡೆದುಕೊಳ್ಳಿ ಎಂದು ಹೇಳಿದ್ದರು ಎಂದು ಹೇಳುತ್ತಾರೆ. 2017 ರಲ್ಲಿ ನನ್ನ ತಾಯಿಯ ಮುಖಾಂತರ ನನಗೆ ಗೊತ್ತಾಗಿರುತ್ತದೆ. 2017 ರಲ್ಲಿ ನಿಪಿ3 ಕ್ಕೆ ಸಂಬಂಧಪಟ್ಟಂತೆ ನಿಮ್ಮ ತಾಯಿಯಿಂದ ವಿಚಾರ ತಿಳಿದುಬಂದಾಗ ಅದನ್ನು ರದ್ದುಗೊಳಿಸಲು ಯಾವುದಾದರೂ ಪ್ರಯತ್ನ ಮಾಡಿದ್ದೀರಾ ಎಂದರೆ ಇಲ್ಲ, ಆದರೆ ನಾನು 2 ವಾರಗಳವರೆಗೆ ಬಂದಿದ್ದ ಕಾರಣ ಪತ್ರಿಕಾ ಪ್ರಕಟಣೆಯನ್ನು ನೀಡಿದ್ದೇನೆ ಎಂದು ಹೇಳುತ್ತಾರೆ.

6. 2006 ರಲ್ಲಿ ಭಾರತಕ್ಕೆ ಬಂದಾಗ ನಿಮ್ಮ ಕೈಯಲ್ಲಿ ಸಾಕಷ್ಟು ಹಣ ಇತ್ತಾ ಎಂದರೆ ಇತ್ತು. ನಿಮಗೆ ಶ್ರೀಮತಿ. ಆಲ್ಬಿಸ್ ಅಲ್ಬೂಕರ್ ಕೋಂ ಜೇಮ್ಸ್ ಅಲ್ಬೂಕರ್ ರವರ ಪರಿಚಯ ಇದೆಯಾ ಎಂದರೆ ಹೌದು. ನೀವು ಆಕೆಗೆ ಚೆಕ್ ನೀಡಿದ್ದೀರಾ ಎಂದರೆ ಹೌದು. ತದನಂತರದಲ್ಲಿ ಚೆಕ್ ಅಮಾನ್ಯವಾಗಿದೆ ಎಂದರೆ ಸರಿ. ಅದು 1 ಲಕ್ಷಕ್ಕೆ ಸಂಬಂಧಪಟ್ಟ ಚೆಕ್ ಎಂದರೆ ಹೌದು. ಆ ಹಣವನ್ನು ನೀವು ಆಕೆಗೆ ವಾಪಾಸು ಕೊಟ್ಟಿದ್ದೀರಾ ಎಂದರೆ ಹೌದು. ಅದಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ರಶೀದಿ ಇದೆಯಾ ಎಂದರೆ ಸಾಕ್ಷಿ ಇಲ್ಲ, ಆದರೆ ನನ್ನ ಕಡತವನ್ನು ನೋಡಿ ಹೇಳಬೇಕು ಎಂದು ಹೇಳುತ್ತಾರೆ. ಚೆಕ್ ಅಮಾನ್ಯವಾದ ನಂತರ ಆಕೆ ವಕೀಲರಾದ ಶ್ರೀ. ಹೇಮಚಂದ್ರ ಶೆಟ್ಟಿರವರ ಮೂಲಕ ನೋಟೀಸ್ ನೀಡಿದ್ದರು ಎಂದರೆ ಹೌದು. ಆ ಚೆಕ್ ನ್ನು ಆಕೆಯಿಂದ ವಾಪಾಸು ಪಡೆದಿದ್ದೀರಾ ಎಂದರೆ ನಾನು ಪಡೆದಿಲ್ಲ ಆದರೆ 8 ನೇ ಪ್ರತಿವಾದಿ ಪಡೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿಗೆ ಸದರಿ ನೋಟೀಸು ಮತ್ತು ಚೆಕ್ ನ್ನು ತೋರಿಸಲಾಗಿ ಸಾಕ್ಷಿ ನೋಡಿ ಒಪ್ಪಿದ ಮೇರೆಗೆ ನೋಟೀಸ್ ನ್ನು ನಿಡಿ8 ಎಂದು, ಚೆಕ್ ನ್ನು ನಿಡಿ9 ಎಂದು ಗುರುತಿಸಲಾಯಿತು. (ಈ ಹಂತದಲ್ಲಿ 7 ನೇ ಪ್ರತಿವಾದಿ ಪರ ವಕೀಲರು ಸದರಿ ದಾಖಲೆಗಳನ್ನು ಗುರುತಿಸಲು ತಕರಾರು ಇದೆ ಎಂದು ತಿಳಿಸಿದ್ದು, ಮೂಲ ದಾಖಲೆಗಳನ್ನು ಹಾಜರುಪಡಿಸಿದ್ದು, ಸದರಿ ದಾಖಲೆಗಳು ಸಾಕ್ಷಿಗೆ ಸಂಬಂಧಪಟ್ಟ ಕಾರಣ 7 ನೇ ಪ್ರತಿವಾದಿ ಪರ ವಕೀಲರು ತಕರಾರನ್ನು ತಳ್ಳಿಹಾಕಲಾಯಿತು). ಚೆಕ್‌ಗೆ ಸಂಬಂಧಪಟ್ಟ ಹಣವನ್ನು 5 ನೇ

ಪ್ರತಿವಾದಿ ಎಲಿಸ್ ರವರಿಗೆ ಪಾವತಿ ಮಾಡಿದ್ದಾರೆ ಎಂದರೆ ಸಾಕ್ಷಿ ಹೌದು ನಾನು ಆ ಹಣವನ್ನು 5 ನೇ ಪ್ರತಿವಾದಿಗೆ ನಗದು ರೂಪದಲ್ಲಿ ಕೊಟ್ಟಿದ್ದೆ ಎಂದು ಹೇಳುತ್ತಾರೆ. 5 ನೇ ಪ್ರತಿವಾದಿಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ, 5 ನೇ ಪ್ರತಿವಾದಿ ನನ್ನ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಾಗದ ರೀತಿಯಲ್ಲಿ ರಕ್ಷಿಸಿದ್ದಾರೆ ಎಂದರೆ ಸರಿಯಲ್ಲ. ಇಲ್ಲಿಯವರೆಗೂ 5 ನೇ ಪ್ರತಿವಾದಿ ಮದುವೆಯಾಗಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿರುವ ಪ್ರಕಾರ ಮದುವೆಯಾಗಿಲ್ಲ ಎಂದು ಹೇಳುತ್ತಾರೆ. ಕುಟುಂಬದವರ ಹಿತಾಸಕ್ತಿಗೋಸ್ಕರ 5 ನೇ ಪ್ರತಿವಾದಿ ಮದುವೆಯಾಗದೆ ಹಾಗೆ ಉಳಿದಿದ್ದಾರೆ ಎಂದರೆ ಸರಿಯಲ್ಲ. ಈಗಲೂ ಸಹ ದಾವಾ ಸ್ವತ್ತು ನನ್ನ ತಾಯಿಯ ಹಸೆರಿನಲ್ಲಿದೆ ಎಂದರೆ ಸರಿ. 8 ನೇ ಪ್ರತಿವಾದಿ ದಾವಾ ಸ್ವತ್ತುಗಳ ಮೇಲೆ ಯಾವುದಾದರೂ ಸಾಲವನ್ನು ಪಡೆದಿದ್ದಾರಾ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆ ನೀವು ಎಸ್.ಸಿ.ಡಿ.ಸಿ ಬ್ಯಾಂಕಿಗೆ ನೀಡಿದ ದಾಖಲೆ ಎಂದರೆ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಹೌದು, ನಾನು ನನ್ನ ತಂದೆಯವರಿಗೆ ಕೊಟ್ಟಿದ್ದು ಎಂದು ಹೇಳುತ್ತಾರೆ. ಸದರಿ ದಾಖಲೆಯಲ್ಲಿ ನನ್ನ ತಂದೆ ಹಾಗೂ 8 ನೇ ಪ್ರತಿವಾದಿಗೆ ದಾವಾ ಆಸ್ತಿಗಳ ಆಧಾರದ ಮೇಲೆ ಸಾಲ ಕೊಡುವುದಕ್ಕೆ ನನ್ನದು ಆಕ್ಷೇಪ ಇಲ್ಲ, ನನ್ನ ಒಪ್ಪಿಗೆ ಇದೆ ಎಂದು ದಾಖಲೆ ನೀಡಿದ್ದೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿದ ಮೇರೆಗೆ ಅದನ್ನು ನಿಡಿ10 ಎಂದು ಗುರುತಿಸಲಾಯಿತು. ನಿಡಿ10 ರಲ್ಲಿರುವ ಅಂಶಗಳನ್ನು ನಾನು ಒಪ್ಪುತ್ತೇನೆ. ಸಾಕ್ಷಿಗೆ ನಿಡಿ10 ನ್ನು ತೋರಿಸಿ ನಿಡಿ10 ರಲ್ಲಿ ಇಂಗ್ಲೀಷ್ ನಲ್ಲಿ ಬರೆದಿರುವ “I am willing to stand as a guarantor” ಎಂದು ಬರೆದಿದ್ದು, ಅದರ ಅರ್ಥ ಏನು ಎಂದರೆ ಸಾಕ್ಷಿ Guarantor ಎಂದರೆ ಹಲವು ವಿಧದಲ್ಲಿ ಇರುತ್ತದೆ, ಬ್ಯಾಂಕಿಗೆ ಗ್ಯಾರಂಟಿ ನೀಡುವ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ವ್ಯವಹರಣೆ ಇದೆ ಎಂದು ಹೇಳುತ್ತಾರೆ.

(ಈ ಹಂತದಲ್ಲಿ 1 ರಿಂದ 6 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)